dac-610
T-P-2

Reg No B G 155 21 12 .Z

In The State First Golden Jubilee Celebrated Paper 'Satyavadi' daily, Mysore 4

ರಾಜ್ಯದಲ್ಲಿ ಪ್ರಥಮ
ಸ್ವತಂತ್ರ
ಮಹೋತ್ಸವ
ಸಂದರ್ಭದಲ್ಲಿ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ನೊಂದವರ ನೆರವಿಗಾಗಿ ಮೈಸೂರ್ ನಗರದಲ್ಲಿ ಪಾದಯಾತ್ರೆ

ಆಟಗಾರರಿಗೆ ಪಾರಿತೋಷಕ

ನವದೆಹಲಿ— ಇಂಗ್ಲೆಂಡ್ ಮತ್ತು ಭಾರತದ ಕ್ರಿಕೆಟ್ ಟೆಸ್ಟ್‌ಗಳಲ್ಲಿ ಪ್ರತಿ ಟೆಸ್ಟಿನಲ್ಲೂ ಅತ್ಯುತ್ತಮ ಬ್ಯಾಟಿಂಗ್, ಬೌಲಿಂಗ್, ಫೀಲ್ಡಿಂಗಿಗೆ ತಲಾ ರೂ. 1000 ಬಹುಮಾನ ಕೊಡಲು ಕ್ರಿಕೆಟ್ ಕಂಟ್ರೋಲ್ ಬೋರ್ಡು ಒಂದು ವಿಲ್ಸ್ ಪುಡ್ ತಯಾರಿಕೆ ಕಂಪೆನಿಯೊಡನೆ ಏರ್ಪಡಿಸಿದೆ.

ಅಕ್ರಮ ಸಾಗಾಣಿನೆ ಪದಾರ್ಥಗಳು

ಬೊಂಬಾಯಿ— ನಗರದ ಅನೇಕ ಕಡೆ 24 ಗಂಟೆ ಕಾಲ ನಡೆಸಿದ ಧಾಳಿಯಲ್ಲಿ ಕಸ್ಟಂಸ್ ಮತ್ತು ಪೋಲೀಸರು ರೂ. 15.50 ಲಕ್ಷ ಬೆಲೆಯ ಚಿನ್ನವೂ ಸೇರಿ, ರೂ. 20 ಲಕ್ಷದಷ್ಟು ಅಕ್ರಮ ಸಾಗಾಣಿಕೆ ಪದಾರ್ಥಗಳನ್ನು ವಶಪಡಿಸಿಕೊಂಡರು

★

ರಕ್ಷಣಾ ಖರ್ಚು ಕಡಮೆಮಾಡಲು

ವಾಷಿಂಗ್ಟನ್— ಅಮೇರಿಕಾವು ಪಾಕಿಸ್ತಾನಕ್ಕೆ ರಕ್ಷಣಾ ಖರ್ಚನ್ನು ಕಡಮೆ ಮಾಡಲು ಸೂಚಿಸಿದೆ

★

ಮುಲ್ಕಿ ರೂಲ್ಸ್

ನವದೆಹಲಿ— ಲೋಕಸಭೆಯಲ್ಲಿ ವಿರೋಧಿಗಳ ಕೇಳಿಕೆಯನ್ನು ನಿರಾಕರಿಸಿ, ಮುಲ್ಕಿ ರೂಲ್ಸ್ ಮಸೂದೆಯನ್ನು ಮಂಡಿಸಲು ಸರಕಾರಕ್ಕೆ ಅನುಮತಿ ಕೊಡಲಾಯಿತು.

★

ಹೆಚ್ಚು ಸಕ್ಕರೆ

ಮೈಸೂರು— ಕಾರ್ಡುದಾರರಿಗೆ ಕ್ರಿಸ್‌ಮಸ್ ಹಬ್ಬಕ್ಕಾಗಿ ಕಾರ್ಡಿಗೆ 1 ಕಿಲೋ ಸಕ್ಕರೆ ಹೆಚ್ಚಾಗಿ ಕೊಡಲಾಗುವುದು

ರೂ. 12 ಲಕ್ಷ !

ನವದೆಹಲಿ— ದೇಶಕ್ಕೆ ಅಕ್ರಮ ಸಾಗಾಣಿಕೆ ಆಗುತ್ತಿರುವ ಪದಾರ್ಥಗಳ ಬಗ್ಗೆ ವರ್ತಮಾನ ಕೊಡಲು ಒಬ್ಬ ಅಕ್ರಮ ಸಾಗಾಣಿಕೆಗಾರನಿಗೆ ರೂ 12 ಲಕ್ಷ ಬಹುಮಾನ ಕೊಡಲಾದ ವಿಷಯವುರಾಜ್ಯ ಸಭೆಯಲ್ಲಿ ಪ್ರಶ್ನಿಸಲ್ಪಟ್ಟಾಗ ಇದನ್ನು ಪರಿಶೀಲಿಸುವುದಾಗಿ ಮಂತ್ರಿಗಳು ಹೇಳಿದರು.

ಲಲಿತಕಲಾ ಮಹೋತ್ಸವ

ಮೈಸೂರು— ಪುರಸಭಾ ಆಶ್ರಯದಲ್ಲಿ ನಡೆಯುತ್ತಲಿರುವ ಲಲಿತಕಲಾ ಮಹೋತ್ಸವದ ಮುಕ್ತಾಯ ಮತ್ತು ಬಹುಮಾನ ವಿನಿಯೋಗ ಸಮಾರಂಭವನ್ನು ತಾ ॥ 22 ಶುಕ್ರವಾರ ಸಂಜೆ 6 ಗಂಟೆಗೆ ಟೌನ್‌ಹಾಲ್ ನಲ್ಲಿ ಪೌರಾಡಳಿತ ಮಂತ್ರಿ ಶ್ರೀ ಬಸವಲಿಂಗಪ್ಪನವರು ನೆರವೇರಿಸುತ್ತಾರೆ.

★

ವಿದ್ಯಾರ್ಥಿಗಳ ಚಳವಳಿ

ಶಿವಮೊಗ್ಗ— ಬೆಲೆ ಇಳಿತದಲ್ಲಿ ತಿಂಡಿ ಪ್ರಮಾಣ ಮತ್ತು ಗುಣವನ್ನು ಹೋಟಲಿನವರು ಇಳಿಸುವುದಿಲ್ಲವೆಂದು ಜಿಲ್ಲಾಧಿಕಾರಿಗಳ ಎದುರಿಗೆ ಒಪ್ಪಿದ್ದರೂ ಹಾಗೆ ಮಾಡದಿರುವದನ್ನು ಪ್ರತಿಭಟಿಸಿ, 3000 ವಿದ್ಯಾರ್ಥಿಗಳು ಮೆರವಣಿಗೆ ಮೊನ್ನೆ ನಡೆಸಿದರು; ಕೆಲವು ಹೋಟಲುಗಳ ಮೇಲೆ ಕಲ್ಲು ತೂರಲಾಗಿ ಹೋಟಲುಗಳು ಮುಚ್ಚಲ್ಪಟ್ಟವು— ಹೋಟಲಿನವರು ಈ ಬಗ್ಗೆ ಜಿಲ್ಲಾಧಿಕಾರಿಗಳನ್ನು ಕಂಡು ತಮ್ಮ ಕಷ್ಟಸುಖ ಹೇಳಿಕೊಳ್ಳಲು, ಒಪ್ಪಿತದಂತೆ ತಿಂಡಿ ಗುಣ ಮತ್ತು ಪ್ರಮಾಣ ಇಳಿಸಬಾರದೆಂದೂ, ಗಲಾಟೆಗೆ ಅವಕಾಶಕೊಡಬಾರದೆಂದೂ ಹಿತಬೋಧೆ ಮಾಡಿದರು.

★

ಕರ್ನಾಟಕ

ನವದೆಹಲಿ— ಮೈಸೂರು ರಾಜ್ಯದ ಹೆಸರನ್ನು ಕರ್ನಾಟಕ ಎಂದು ಪುನರ್ನಾಮಕರಣ ಮಾಡುವ ಮಸೂದೆಯು ಲೋಕಸಭೆಯಲ್ಲಿ ತರಲಾಗಿದೆ.

★

ಜೈ ಆಂಧ್ರ ಧ್ವಜ

ಹಿಂದೂಪುರ— "ಜೈ ಆಂಧ್ರ ಧ್ವಜ" ಹಾರಿಸಿದ 9 ಮಂದಿ ದಸ್ತಗಿರಿ ಮಾಡಲ್ಪಟ್ಟರು.

★

ಆರ್ಮುಗಂ ವರದಿ

ಬೆಂಗಳೂರು— ಅಭಾವ ಪೀಡಿತ ಪ್ರದೇಶಗಳ ಸಂಬಂಧಿಸಿದ ಹಿರಿಯ ವಿರೋಧ ಪಕ್ಷದ ಸದಸ್ಯ ಶ್ರೀ ಆರ್ಮುಗಂರವರ ವರದಿಯು ಶಾಸನಸಭೆಗೆ ಅರ್ಪಿಸಲಾಯಿತು – 130 ಪುಟಗಳ ಇದರಲ್ಲಿ ಅನೇಕ ವಿಷಯಗಳಿವೆ ಅಭಾವದಿಂದ 4 ಮಿಲಿಯ ಜನ ಪೀಡಿತರಾಗಿದ್ದು, ಸರ್ಕಾರದ ಪರಿಹಾರ ಕ್ರಮ ಶೇಕಡ 5 ಮಂದಿಗೆ ದೊರೆಯುತ್ತಿದೆ – ಕೇಂದ್ರದಿಂದ ರೂ. 50 ಕೋಟಿ ನೆರವು ಪಡೆಯಬೇಕು – ಅಭಾವ ಜಿಲ್ಲೆಗಳಿಂದ ಲಕ್ಷಾಂತ ಜನ ಪಕ್ಕದ ಜಿಲ್ಲೆಗಳಿಗೆ ಅಥವಾ ಮಹಾರಾಷ್ಟ್ರಕ್ಕೆ ಮನೆಮಠ ಬಿಟ್ಟು ಕೆಲಸ ಹುಡುಕಿಕೊಂಡು ಹೋಗುತ್ತಿದ್ದಾರೆ – ವ್ಯವಸಾಯಗಾರರು ತಮ್ಮ ದನಕರುಗಳನ್ನು ಒಡವೆವಸ್ತುಗಳನ್ನು ಸಿಕ್ಕಿದ ಬೆಲೆಗೆ ಮಾರುತ್ತಿದ್ದಾರೆ – ಕೆಲವು ಹಿಂದೂ ಹೆಂಗಸರು ತಮ್ಮ ಪವಿತ್ರ ಮಾಂಗಲ್ಯ ಸೂತ್ರವನ್ನು ಮಾರಿದ್ದಾರೆ – ಇಂತಹ ಪರಿಸ್ಥಿತಿಯಲ್ಲಿ ಒಬ್ಬ ಗಣ್ಯರ ಗೌರವಾರ್ಥ 400 ಜನರಿದ್ದ ಭಾರಿ ಔತಣ ನಡೆಯಿತು : ರಾಜಕೀಯ ಗಣ್ಯರು, ಹಿರಿಯ ಸರ್ಕಾರಿ ಅಧಿಕಾರಿಗಳು ಭಾಗವಹಿಸಿದ್ದರು ; ಈ ರೂ. 10000 ಭೋಜನಕೂಟದಲ್ಲಿ ಹೆಚ್ಚು ಹೆಚ್ಚಾಗಿ ಬಡಿಸಲ್ಪಟ್ಟು ಊಟದ ನಂತರ ಅನೇಕರ ಎಲೆಗಳಲ್ಲಿ ಎಷ್ಟೋ ಮುಟ್ಟಲ್ಪಡದೇ ಆಹಾರ ಇದ್ದವು.

ಪಾಟೀಲ್ ಹೊರಕ್ಕೆ

ಸ್ಪೀಕರರ ಆಜ್ಞೆಯ ಪ್ರಕಾರ ಶ್ರೀ ವಾಟಾಳ್ ನಾಗರಾಜ್‌ರವರನ್ನು ಶಾಸನ ಸಭೆಯಿಂದ ಮಾರ್ಷಲ್ ಶರೀರ ಅನಾಮತ್ತಾಗಿ ಎತ್ತಿ ಹೊರಗೆ ತರಲಾಯಿತು ಆರ್ಮುಗಂ ವರದಿ ಕುರಿತು ಅವರು ಪ್ರಸ್ತಾಪಿಸುತ್ತಾ, ಸರ್ಕಾರ ರಾಜೀನಾಮೆ ಕೊಡಬೇಕು ಮುಂತಾಗಿ ಹೇಳಹೊರಟಾಗ ಸ್ಪೀಕರರು ಕುಳಿತುಕೊಳ್ಳುವಂತೆ ಅವರಿಗೆ ಎಷ್ಟು ಹೇಳಿದರೂ ಅವರು ಕೇಳಲಿಲ್ಲ

●

ನೆರವಿಗಾಗಿ ಪಾದಯಾತ್ರೆ

ಮೈಸೂರಿನಲ್ಲಿ ನಡೆದ ಸರ್ಕಾರದ ಸರ್ವ ಅಧಿಕಾರಿಗಳ ಸಭೆಯಲ್ಲಿ ಚಿಕ್ಕಹೊಳೆ ಆಣೆಕಟ್ಟು ಒಡೆದ ಸಂಭರ್ದಲ್ಲಿ ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ ತಾಲ್ಲೂಕುಗಳಲ್ಲಿ ವಿವಿಧ ಪರಿಹಾರ ಕಾರ್ಯಗಳನ್ನು ವಿಮರ್ಶಿಸಲಾಯಿತು ಹಣ, ಆಹಾರ ಪದಾರ್ಥ ಹಾಗೂ ಬಟ್ಟೆಬರೆಗಳ ಸಂಗ್ರಹಣೆಗಾಗಿ ಜನವರಿ 3 ರಂದು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಪಾದಯಾತ್ರೆ ನಡೆಸಲು ನಿರ್ಧರಿಸಲಾಗಿದೆ ಚಲನಚಿತ್ರ ತಾರೆಯರು, ಯುವ ನಾಯಕರು, ಸರಕಾರಿ ಅಧಿಕಾರಿಗಳು ಇದರಲ್ಲಿ ಭಾಗವಹಿಸುವರು.

●

ಓವರ್‌ಡ್ರಾಫ್ಟ್ ಸಾಲವಾಗಲಿ

ನವದೆಹಲಿ— ಮೈಸೂರು ತನ್ನ ಓವರ್‌ಡ್ರಾಫ್ಟು ರೂ. 62.56 ಕೋಟಿಯನ್ನು ದೀರ್ಘಾವಧಿ ಸಾಲವಾಗಿ ಪರಿಗಣಿಸಲು ಕೇಂದ್ರವನ್ನು ಒತ್ತಾಯ ಮಾಡಿದೆ.

○

ಮಹಿಳೆಯರ ಭಾರಿ ಮೆರವಣಿಗೆ

ನಂದ್ಯಾಲ್— ನಂದ್ಯಾಲ ಮಹಿಳಾ ಮಂಡಲಿಯವರು, ಪ್ರತ್ಯೇಕ ಆಂಧ್ರರಾಜ್ಯದ ಒತ್ತಾಯದ ಕೇಳಿಕೆಹಾಕಿ, ಸಹಸ್ರಾರು ಹೆಂಗಸರು ಮತ್ತು ಮಕ್ಕಳ ಭಾರಿ ಮೆರವಣಿಗೆ ಏರ್ಪಡಿಸಿತು.

ವುಡ್‌ಲಾಂಡ್ಸ್ 22 12 72 ರಿಂದ ಅಮೋಘ 2ನೇ ವಾರ

ಸೆವೆ ಆರ್ಟ್ಸ್ ಪಿಕ್ಚರ್ಸ್‌ರವರ ಹಿಂದಿ ವರ್ಣ ಚಿತ್ರ

ರಾ ಜಾ ಜಾ ನಿ

ಪ್ರತಿ ದಿನ 3 ಪ್ರದರ್ಶನಗಳು

ಪಾತ್ರ – ಧರ್ಮೇಂದ್ರ ಹೇಮಮಾಲಿನಿ ಪ್ರೇಂಚೋಪ್ರ ಪ್ರೇಂನಾಥ್
ಹೆಲ್ಪ ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್

ಬೆಳಗಿನ ಪ್ರದರ್ಶನ 10-30 ಕ್ಕೆ ವೀರಸಂಕಲ್ಪ

ಅಪೆರಾ 22 12 72 ರಿಂದ

ಅತ್ಯಮೋಘ ಹಿಂದಿ ಕಲರ್ ಚಿತ್ರ

ಗೂಡುಪುಟಾಣಿ

ಈಸ್ಟ್‌ಮನ್ ಕಲರ್ ತೆಲುಗು ಚಿತ್ರ

ನಿರ್ದೇಶನ : ಕೆ. ಲಕ್ಷ್ಮೀದೀಪಕ್

ದಿನ 3 ಪ್ರದರ್ಶನಗಳು

ಪ್ರತೀಕಾರ

ಕ್ಯಾಲಿಫೋರ್ನಿಯಾದ ನಾಗರೀಕನೊಬ್ಬ ಅದಾಯ ತೆರಿಗೆ ಇಲಾಖೆಯವರನ್ನು ಸತಾಯಿಸಿಕೊಳ್ಳಲು ಒಂದು ಉಪಾಯ ಯೋಚಿಸಿದ. ಪ್ರತೀಕಾರವೇ ಅವನ ಉದ್ದೇಶವಾಗಿತ್ತು. ತೆರಿಗೆ ವಸೂಲಿ ಮಾಡುವವರು ಬಂದಾಗ ಅವನು ತಾನು ನೀಡಬೇಕಾಗಿದ್ದ 2000 ಡಾಲರುಗಳನ್ನು ಅತ್ಯಂತ ಚಿಕ್ಕ ನಾಣ್ಯಗಳನ್ನು ನೀಡಿದ. ಅದು 13 ಕಿಲೋಗ್ರಾಂ ತೂಕದ 50 ಚೀಲ ಹಣವಾಗಿತ್ತು. (ಭಾರತದ ಪ್ರತಿಯೊಂದು ಊರಿನಲ್ಲಿ ಹೀಗೆ ಮಾಡಿದ್ದರೆ "ಚಿಲ್ಲರೆ ರೋಗ" ಹಿಡಿದ ನಾವು ಎಷ್ಟು ಸುಖಿಗಳಾಗುತ್ತಿದ್ದೆವು). [ಪ್ರಭಾತ]

ಮೃಗರಾಜ ಸಿಂಹ

ಎಲ್ಲಾ ಸಿಂಹಗಳು ನರಭಕ್ಷಕವಲ್ಲ; ಅವ್ವಚ್ಚ ಸಿಂಹಗಳು ಮಾತ್ರ ಎಂದು ಹೇಳುತ್ತಾರೆ ಧರ್ಮಕುಮಾರ ಸಿಂಹಜಿ. ಬಹುತೇಕ ಸಿಂಹಗಳು ಮಾನವನ ಪ್ರಚೋದನೆಯಿಂದಲೇ ಅವನ ಮೇಲೆರಗುತ್ತದೆಂದು ಅವರು ಹೇಳುತ್ತಾರೆ; ಸಿಂಹವನ್ನು ದಯಾಗುಣದಿಂದ ಬೆಳೆಸಿದ್ದರೆ ಅದು ಮಾನವನ ಬಗ್ಗೆ ಗೌರವ ತೋರುವದೆಂದೂ ಅವನ ಸಾಮರ್ಥ್ಯವನ್ನು ಕಂಡು ಅಂಜುವುದೆಂದೂ ಅವರು ಹೇಳಿದ್ದಾರೆ.

ದಿವ್ಯವಾಣಿ

ಜನರು ಅನ್ಯಾಯವಾಗಿ ಸಾವನ್ನು ದ್ವೇಷಿಸುತ್ತಾರೆ; ಅದು ಅವರ ಅನೇಕಾನೇಕ ಕೇಡುಗಳ ರಕ್ಷಣೆಯಾಗಿದೆ. — ಎಸ್ಕಿಲನ್

Cruelty to Animals

It is ironical that in this land of non-violence and Ahimsa we should not lead our citizens to be kind to dumb animals.

(Indian Express)

ಭಾರತದಲ್ಲಿ ಗೋವಧೆ
ಪೂರ್ಣ ನಿಷೇಧವಾಗಲಿ

Protect the Cow



Help The Gorakshana

— Humanitarian Propoganda Monthly —

S H A K T I

S U D H A

A Superb Tonic

Quality Printing Neat Binding

Lakshminarasimha Press

Sivarampet, Mysore 1

Edited Printed and Published by Dharmapracharanirata M S Krishna Rao (Proprietor) at the Satvavadi Press, Chamaraja puram, Mysore 4

Bank Road Bahusar, A Fair Price Shop in Actual Practice